ಶಿವಮೊಗ್ಗಾ ಡಿಸ್ಟ್ರಿಕ್ಟ್.

ತಾರೀಖು 21ನೇ ಏಪ್ರೆಲ್ 1884ನೇ ಇಸವಿ.

ನಗರದಲ್ಲಿ ಯಿರುವ ನೀಲಕೆಂಠೇಶ್ವರ ದೇವಸ್ಥಾನ 1, ಸೊರಬ ತಾಲ್ಲೂಕು ಚಂದ್ರಗುತ್ತಿ ರೇಣುಕಾಮ್ಮನವರ ದೇವಸ್ಥಾನ 1, ಈ 2 ದೇವಸ್ಥಾನಗಳ ಬಾಬತು ಭಂಗಾರ ಬೆಳ್ಳಿ ವಗೈರೆ ಬಾಬತು ನಗಗಳು ಹಿತ್ತಾಳಿ, ತಾಂಬ್ರ, ಕಂಚು ಖಬ್ಬಣ ಇವಗಳ ಬಾಬತು ಪಾತೆ ಸಾಮಾನುಗಳು ಜವಳಿ ಬಟ್ಟೆಗಳು ಯಿವಗಳನ್ನೆಲ್ಲಾ ಸ್ರ ಮಜಕೂರ್ ಮೇ ತಾರೀಖು 27ನೇ ಮಂಗಳವಾರ ಹಗಲು 12 ಘಂಟೆ ಸಮಯದಲ್ಲಿ ಶಿವಮೊಗ್ಗೆಯಲ್ಲಿ ಡಿಸ್ಟ್ರಿಕ್ಟ್ ಟ್ರೆಜರೀ ಆಫೀಸಿನಲ್ಲಿ ಪೋಟೂ ಪೋಟೆಯಿಂದ ಹರಾಜು ಹಾಕಿಸುತ್ತಾದ ಪ್ರಯುಕ್ತ ಚಡ ದರಖಾಸ್ತಿನಿಂದ ಮೊಬಲಗು ಕೂಡ್ಲೇ ಹಾಜರ್ ಮಾಡಿ ಮಾಲ್ ಪಡಿಯುವದಕ್ಕೆ ಇಷ್ಟ ಉಳ್ಳಂಥಾ ಸಮಸ್ತ ಜನರೂ ಸದರೀ ಸಮಯಕ್ಕೆ ಡಿಸ್ಟ್ರಿಕ್ಟ್ ಆಫೀಸ್ ಬಳಿ ಹಾಜರ್ ಯಿರಬೇಕು.

ಆಕ್ಶನ್ ದರಖಾಸ್ತುದಾರರು ಆ ಬಾಬತು ಮೊಬಲಗು ಹಾಜರ್ ಮಾಡುವದಕ್ಕೆ ತಪ್ಪಿದರೆ ಅಂಥಾ ಮಾಲ್‌ಗಳನ್ನು ಪುನಹ ಹರಾಜು ಮಾಡಿಸಿ ಕಮ್ಮಿ ಆಗ.ವ ಮೊಬಲಗು ಪುರು ದರಖಾಸ್ತುದಾರನಿಂದ ವಸೂಲ್ ಮಾಡುವದರಲ್ಲಿ ಬರುತ್ತೆ.

ಪಿ. ಪಂಚನಾಥರಾವ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಕಡೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

ದಿವಾಳೀಯಾದ ಡಿಕ್ರಿ ದೇಣೇದಾರ ಬೇಲೂರು ತಾಲ್ಲೂಕು ಅರೇಪಳ್ಳಿ ಹೋಬಳಿ ಮಲ್ಲಾಪುರ ಮಠವಲ್ಲಿ ಇರುವ ದಿವಾಚಾರಿಯ ವಿಲ್ಲಕಾರ್ಯನ ಪಜಿಯರ್ ಜಡ್ಜ್‌ಮೆಂಟ್—ಪೆಟರ್ ವಿಷಯದಲ್ಲಿ—

ಈ ವಿಷಯವು ಸಬಾರ್ಡಿನೇಟ್ ಜಡ್ಜ್ ಬಿ. ತಿರುಮಲಾಚಾರ್ಯರು ರೂಬರೂ ದಿವಾಳಿಯಾದವನ ತರಫ ಪ್ಲೀಡರ್ ವೆಂಕಟರಮಣಯ್ಯನವರ ಸಮಕ್ಷಮದಲ್ಲಿಯೂ ಮತ್ತು ದಿವಾಳೀದಾರನ ದೇಣೇದಾರರಾದ 1 ರಾವ್‌ದಾಸಪ್ಪ, 2 ಲಬ್ಬೆ ಮಹಮ್ಮದಖಾನೀ, 3ನೇ ದೇವಪ್ಪ, 4ನೇ ಖಾಜಿ ಮಹಮ್ಮದಲ್ಲಿ, 5ನೇ ಸಿ. ಶ್ರೀನಿವಾಸಯ್ಯಂಗಾರ್, 6ನೇ ಪಟೇಲ್ ಬಸವೇಗೌಡ ಇವರ ಎದುರಾಗಿಯೂ ದರ್ಯಾಫ್ತ್ ಮಾಡಲ್ಪಟ್ಟಿತು.

ಮತ್ತು ಸ್ರ 1884ನೇ ಇಸವಿ ಏಪ್ರೆಲ್ 8ನೇ ತಾರೀಖಿನ ಬಾಬತು ರಿಸೀವರಾದ ನಂಜಪ್ಪನ ಸರಟಿಫಿಕೇಟ್ ಬದಲಾಯಿತು. ಇದೇ ವಿಷಯದಲ್ಲಿ ಸ್ರ 1884ನೇ ಇಸವಿ ಜನವರೀ 30ನೇ ತಾರೀಖಿನಲ್ಲಿ ಈ ಕೋರ್ಟ್‌ನಿಂದ ಮಾಡಲ್ಪಟ್ಟ ಹುಕ್ಕುಂ ಮೇರಿಗೆ ಪಟ್ಟಿಯಲ್ಲಿ ಕಂಡ ಯಾವ ಸಾಲಗಳಿಗೂ ಐರ್ಜ್ ದಿವಾಳೀಯಾದವನ್ನ ಯಲ್ಲಾ ಜಾಬಾದಾರಿಯಿಂದಲೂ ನಿಖಾಲಸ್ಮಾಡಿರುವದಲ್ಲದೆ ಆ ಬಗ್ಗೆ ಸದರೀಯವನ್ನ ದಸ್ತಗಿರಿ ಮಾಡಿ ಕೈದು ಮಾಡುವದರ ದಕೆಯಿಂದಲೂ ಬಿಡಗಡೆಮಾಡಿ ಇರುವದಾಗಿ ಇದರಿಂದ ಹುಕ್ಕುಂ ಮಾಡಲ್ಪಟ್ಟು ಇಧೆ.

ಸ್ರ 1884ನೇ ಇಸವಿ ಏಪ್ರೆಲ್ ತಾರೀಖು 8ರಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತುನಿಸಿ ಕೊಡಲ್ಪಟ್ಟಿಧೆ.

ತಾರೀಖು 8ನೇ ಏಪ್ರೆಲ್ 1884.

ಸ್ರ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ವಾರಸ್ ಸರಟಿಫಿಕೇಟ್ ಕೊಟ್ಟದ್ದು ವಾಯಿದೆ ಪ್ರಕಾರ ಪ್ರಮಾಣ ಪತ್ರಿಕೆ ಹಾಜರ್ ಮಾಡದ್ದರಿಂದ ಸರಟಿಫಿಕೇಟ್ ರದ್ದುಮಾಡಿದ ಲಿಸ್ಟು:—

ಮೊಕದ್ದಮೆ ನಂಬರ್.		ಯಾರಿಗೆ.	ಯಾರಿಗೋಸ್ಕರ.
1881	ಮಿಸಲೀನಿಯಸ್ ಕೇಸ್ ನಂ. 101	ಮೂಡಗೆರೆ ದಾವೂಸಾಬಿ.	ಮೈತಪಟ್ಟ ಹುಸೇನಸಾಬನಿಗೆ ಬರತಕ್ಕ ವುದಿ) 15,000 ರೂಪಾಯಿ ವಸೂಲಿಗೆ

ಬಿ. ತಿರುಮಲಾಚಾರಿ,
ಸಬ್‌ಜಡ್ಜ್.